**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.377/2022

**PW**. 3

**CW**. 3

**ಸಾಕ್ಷಿಯ ಹೆಸರು –ರಘು**

**ತಂದೆಯ ಹೆಸರು –ರಮೇಶ**

**ವಯಸ್ಸು –38 ವರ್ಷಗಳು**

ದಿನಾಂಕ 19–09–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಹರಿನಹಳ್ಳಿ, ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ನಾಗೇಗೌಡ ನಮ್ಮ ಊರಿನವರು. ಆರೋಪಿ ಸಹ ನಮ್ಮ ಊರಿನವನು. ದಿಃ 25–06–2022 ರಂದು ಸಂಜೆ 6.30 ಗಂಟೆಗೆ ನಾನು ಸ್ವಂತ ಕೆಲಸದ ಮೇಲೆ ಮೋಟರ್ ಸೈಕಲ್ ನಲ್ಲಿ ಹೋಗುವಾಗ ನನ್ನ ಎದುರಿನಿಂದ ಅತ್ತಿಗೋಡು ರಸ್ತೆಯಲ್ಲಿ ಸಂಗರಶೆಟ್ಟಿ ಹಳ್ಳಿ ಗ್ರಾಮ ಸರ್ಕಾರಿ ಶಾಲೆಯ ಮುಂಭಾಗ ಮೃತ ನಾಗೇಗೌಡ ಚಾಸಾ–2 ರವರ ಮೋಟರ್ ಸೈಕಲ್ ನಲ್ಲಿ ಬರುತ್ತಿದ್ದು , ಶಾಲೆ ಮುಂಭಾಗ ಮೃತ ನಾಗೇಗೌಡ ಮೋಟರ್ ಸೈಕಲ್ ನಿಂದ ಕೆಳಗೆ ಬಿದ್ದು, ಹೊಟ್ಟೆ ಮತ್ತು ಕೈ ಕಾಲುಗಳಿಗೆ ಪೆಟ್ಟಾಗಿ ಗಾಯಗೊಂಡನು. ಕೂಡಲೇ ನಾನು ಮೃತ ನಾಗೇಲಗೌಡನ ಹೆಂಡತಿಗೆ ವಿಚಾರ ತಿಳಿಸಿದ್ದು, ಆತನ ಹೆಂಡತಿ, ಮಗಳು ಮತ್ತು ಮೊಮ್ಮಗಳು ಸ್ಥಳಕ್ಕೆ ಬಂದಿದ್ದು , ನಾವೆಲ್ಲ ಸೇರಿ ನಾಗೇಗೌಡನನ್ನು ಪಿರಿಯಾಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಸೇರಿಸಿದ್ದು, 10 ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೇ ನಾಗೇಗೌಡ ಮೃತಪಟ್ಟಿರುತ್ತಾನೆ.

ದಿಃ 01-07-2022 ರಂದು ಪೊಲೀಸರು ನನ್ನ ಸಮಕ್ಷಮ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿ, ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು , ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಆ ದಿನ ಆರೋಪಿ ನಾಗೇಗೌಡಡನ್ನು ಕಲ್ಲಿನಿಂದ ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

ಆದರೆ ದಿಃ 26-09-2022 ರಂದು ನಾನು ಪಿರಿಯಾಪಟ್ಟಣ ನ್ಯಾಯಾಲಯಕ್ಕೆ ಹೋಗಿ ಕಲಂ 164 ಅಡಿಯಲ್ಲಿ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು, ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಾನು ನನ್ನ ಹೇಳಿಕೆಯಲ್ಲಿ ಆರೋಪಿ ನಾಗೇಗೌಡನನ್ನು ಚಾಸಾ-2 ರವರ ಬೈಕಿನಿಂದ ಎಳೆದು, ಕೆಳಗೆ ಬಿಳಿಸಿ ಕೆ ಕಾಲಿನಿಂದ ಒದ್ದು, ನ್ಯಾಯಾಲಯದ ಮುಂದಿರುವ ಕಲ್ಲಿನಿಂದ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿಕೆ ನೀಡಿಲ್ಲ. ಆದರೆ ನಾನು ಹಾಗೂ ಇತರರು ಸೇರಿ ನಾಗೇಗೌಡನನ್ನು ಆಸ್ಪತ್ರೆಗೆ ಸೇರಿಸಿದ್ದೇವೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ಈಗ ತೋರಿಸುತ್ತಿರುವ ಫೋಟೋದಲ್ಲಿ ಪಂಚನಾಮೆ ಮಾಡಿದ ಸ್ಥಳ ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ನ್ಯಾಯಾಲಯದ ಮುಂದಿರುವ ಕಲ್ಲು, ಸ್ಥಳದಲ್ಲಿ ಚೆಲ್ಲಿದ ರಕ್ತಸಿಕ್ತ ಮಣ್ಣು ಹಾಗೂ ರಕ್ತರಹಿತ ಮಣ್ಣನ್ನು ಜಪ್ತಿ ಮಾಡಿರುತ್ತಾರೆ. ಎಂದರೆ ಸರಿ. ನಂತರ ನಾಗೇಗೌಡ

ಧರಿಸಿದ್ದ ಒಂದು ಬನಿಯನ್, ಶರ್ಟ ಹಾಗೂ ಒಂದು ಶಾಲ್ ಗಳನ್ನು ನಾನೇ ಸ್ಥಳದಲ್ಲಿ ಹಾಜರು ಮಾಡಿದ್ದೇನೆ. ಎಂದರೆ ಸರಿ. ಆ ಬಗ್ಗೆ ಸದರಿ ಒಟ್ಟು 8 ಫೋಟೋಗಳನ್ನು ಈಗ ನೋಡುತ್ತಿದ್ದು, ನಿಪಿ–8 ರಿಂದ 15 ಎಂದು ಗುರುತಿಸಲಾಯಿತು. ಸದರಿ ಬನಿಯನ್, ಶರ್ಟ ಹಾಗೂ ಒಂದು ಶಾಲ್ ಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಮು.ಮಾ–1 ರಿಂದ 3 ಎಂದು ಗುರುತಿಸಲಾಯಿತು.

ದಿಃ 25–06–2022 ರಂದು ಸಂಜೆ 6.30 ಗಂಟೆಗೆ ಚಾಸಾ–2 ರವರ ಮೋಟರ್ ಸೈಕಲ್ ನಿಂದ ನಾಗೇಗೌಡ ಕೆಳಗ್ಗೆ ಬಿದ್ದಿಲ್ಲ ಎಂದರೆ ಸರಿಯಲ್ಲ. ಆ ದನ ಹಿಂದಿನಿಂದ ಬಂದ ಆರೋಪಿ ನಾಗೇಗೌಡನನ್ನು ಮೋಟರ್ ಸೈಕಲ್ ನಿಂದ ಎಳೆದುಕೊಂಡು ಸ್ಥಳದಲ್ಲಿದ್ದ ನ್ಯಾಯಾಲಯದ ಮುಂದಿರುವ ಕಲ್ಲನ್ನು ತೆಗೆದುಕೊಂಡು ಆರೋಪಿಯು ನಾಗೇಗೌಡನ ತಲೆಗೆ, ಮೈ ಕೆಗೆ ಹೊಡೆದು ಗಾಯಪಡಿಸಿದ ಎಂದರೆ ಸರಿಯಲ್ಲ. ನಾಗೇಗೌಡನನ್ನು ಅದೇ ದಿನ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ವಿಚಾರಿಸಲಾಗಿ, ಆರೋಪಿ ಹೆಂಡತಿ ಅವನೊಂದಿಗೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿದ್ದು , ಸುಮಾರು 4 ತಿಂಗಳುಗಳಿಂದ ನಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದು , ನನ್ನ ಮಗಳು ಗಂಡನ ಮನೆ ಬಿಟ್ಟು ನನ್ನ ಮನೆಯಲ್ಲಿರುವುದರಿಂದ, ನೀನು ಊಟಕ್ಕೆ ನಮ್ಮ ಮನೆಗೆ ಬಂದರೆ ಊರಿನ ಜನರು ಇಲ್ಲಸಲ್ಲದ ಮಾತನಾಡಿ ತಪ್ಪು ತಿಳಿದುಕೊಳ್ಳುತ್ತಾರೆ ಎಂದು ಊಟ ಕೊಡದೆ ನಿಲ್ಲಿಸಿದ್ದೆ, ಆ ವಿಚಾರದಲ್ಲಿ ನನ್ನ ಮೇಲೆ ದ್ವೇಷ ಇಟ್ಟುಕೊಂಡು ಗಲಾಟೆ ಮಾಡಿದ್ದಾನೆ ಎಂದು ನಾಗೇಗೌಡ ನಮ್ಮ ಮುಂದೆ ಹೇಳಿದ ಎಂದರೆ ಸರಿಯಲ್ಲ. ಆ ಬಗ್ಗೆ ಈಗ ನನಗೆ ಓದಿ ಹೇಳಿದಂತೆ ನಿಪಿ– 16 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಆ ಬಗ್ಗೆ ಪಿರಿಯಾಪಟ್ಟಣ ನ್ಯಾಯಾಲಯದ ಮುಂದೆ ನಿಪಿ–7 ರಂತೆ ನಾನು ಹೇಳಿಕೆ ನೀಡಿ, ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–6 ಪಂಚನಾಮೆ, 7 ರ ಹೇಳಿಕೆ, ನಿಪಿ–8 ರಿಂದ 15 ರ ಫೋಟೋಗಳ ಬಗ್ಗೆ ಮಾಹಿತಿ ಇದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.